**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.64/2013

ಸಾಕ್ಷಿಯನ್ನು ದಿಃ **23.07.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 1ನೇ ಪ್ರತಿವಾದಿಯರ ಪರಃ ಶ್ರೀ. ಎಸ್.ಎಸ್ ವಕೀಲರಿಂದ**:

ನನ್ನ ಮಾವನಿಗೆ ಬೂದನೂರಿನಲ್ಲಿ ಸ್ವಂತ ಮನೆ ಇರಲಿಲ್ಲ ಎಂದರೆ ಅದರ ವಿಷಯ ನನಗೆ ಗೊತ್ತಿಲ್ಲ. ನನ್ನ ಗಂಡನ ತಂದೆ ಪೇಟಯ್ಯರವರಿಗೆ ಬೂದನೂರಿನಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಇತ್ತು. ಆ ಬಗ್ಗೆ ದಾಖಲೆಗಳನ್ನು ನೋಡಿದ್ದಿರಾ ಎಂದರೆ ಇಲ್ಲ. ನನ್ನ ಮಾವ ಪೇಟಯ್ಯರವರು ಮಂಡ್ಯಕ್ಕೆ ಬರೀಗೈಯಲ್ಲ್ ಹೋಗಿದ್ದರು ಎಂದರೆ ಸರಿಯಲ್ಲ. ನನಗೆ ಗೊತ್ತಿದ್ದ ಪ್ರಕಾರ ಅವರು ಜಮೀನು ಮಾರಾಟ ಮಾಡಿ ಅಲ್ಲಿಗೆ ಹೋಗಿದ್ದರು. ಆ ಬಗ್ಗೆ ದಾಖಲೆಗಳನ್ನು ನೋಡಿದ್ದಿರಾ ಎಂದರೆ ಇಲ್ಲ. ದಾಖಲೆಗಳನ್ನು ನೋಡಲು ತೊಂದರೆ ಇತ್ತೇ ಎಂದರೆ ಅಂತಹ ಸಂದರ್ಭ ಬರಲಿಲ್ಲ. ನನ್ನ ಮಾವ ಪೇಟಯ್ಯರವರಿಗೆ ಹೊಂಬಾಳಮ್ಮ ಎಂಬುವವರಿಗೆ ವಿವಾಹವಾಯಿತು ಎಂದರೆ ಸರಿ. ಹೊಂಬಾಳಮ್ಮರವರ ಅಣ್ಣ ಎಂ.ಕೆ. ಶಿವನಂಜಪ್ಪ ಎನ್ನುವವರು ಮಂಡ್ಯದಲ್ಲಿ 3 ಬಾರಿ ಎಂ.ಪಿ ಆಗಿ ಚುನಾಯಿತರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ ಆದರೆ ಆ ಬಗ್ಗೆ ಕೇಳಿಪಟ್ಟಿದ್ದೆ. ಪೇಟಯ್ಯ ಮತ್ತು ಹೊಂಬಾಳಮ್ಮ ಎಂಬುವವರಿಗೆ ಇಬ್ಬರು ಹೆಣ್ಣು ಮತ್ತು 4 ಗಂಡು ಮಕ್ಕಳು ಎಂದರೆ ಸರಿ. ನನ್ನ ಮಾವ ಪೇಟಯ್ಯರವರು ಮಂಡ್ಯದ ಮೈನ್ ಶುಗರ್ ಫ್ಯಾಕ್ಟರಿಯಲ್ಲಿ Pan Man ಆಗಿ ಕೆಲಸಕ್ಕೆ ಸೇರಿದ್ದರು ಎಂದರೆ ಆ ಬಗ್ಗೆ ನನಗೆ ಈಗ ಗೊತ್ತಾಗಿದೆ. ಪೇಟಯ್ಯರವರು ಉದ್ಯೋಗಸ್ಥರಾಗಿದ್ದ ಕಾರಣ ಅವರ ಮದುವೆಯಾಯಿತು ಎಂದರೆ ಸರಿ. ಆ ಕಾರಣದಿಂದಾಗಿ ನನ್ನ ಅತ್ತೆ ಹೊಂಬಾಳಮ್ಮನವರ ಅಣ್ಣನಾದ ಎಂ.ಕೆ.ಶಿವನಂಜಪ್ಪರವರು ಹೊಂಬಾಳಮ್ಮರವರ 6 ಜನ ಮಕ್ಕಳಿಗೂ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಿದರು ಎಂದರೆ ಸರಿಯಲ್ಲ. ಆ ವಿದ್ಯಾಭ್ಯಾಸದಿಂದಾಗಿ ನನ್ನ ಗಂಡ ಬಿ.ಇ ಓದಿದರು ಎಂದರೆ ಸರಿ. 2ನೇ ಪ್ರತಿವಾದಿ ಮೆಡಿಕಲ್ ಓದಿದರು ಎಂದರೆ ಸರಿ. ನನ್ನ ಮಾವನ ಮೊದಲನೇ ಮಗ ಅಂದರೆ 5ನೇ ಪ್ರತಿವಾದಿಯ ಗಂಡ ಹಾಗೂ 6ನೇ ಪ್ರತಿವಾದಿಯತಂದೆ ಬಿ.ಪಿ ಚಂದ್ರಶೇಖರ್ ರಮರ ಮೈಸೂರು ಮಹಾರಾಜ ಕಾಲೇಜಿನಲ್ಲಿ

ಬಿ.ಎ ಪಧವಿ ಓದಿದರು ಎಂದರೆ ಸರಿ. 4ನೇ ಪ್ರತಿವಾದಿ ಎಂ.ಬಿ.ಬಿ.ಎಸ್ ಓದಿದರು ಎಂದರೆ ಸರಿ. 1ನೇ ಪ್ರತಿವಾದಿ ನನ್ನ ಮಾವ ಪೇಟಯ್ಯರವರಿಗೆ ಕೊನೆಯ ಮಗ ಎಂದರೆ ಸರಿ. ಅವರು ಕೂಡ ಬಿ.ಇ ಪಧವಿದರರು ಆಗಿದ್ದರು ಎಂದರೆ ಸರಿ. ನನ್ನ ಮಾವ ಪೇಟಯ್ಯರವರು ಮಂಡ್ಯಕ್ಕೆ ಬಂದು ಹೋಂಬಾಳಮ್ಮರವರಿಗೆ ಮದುವೆಯಾದ ನಂತರ ಎಂ.ಕೆ ಶಿವನಂಜಪ್ಪರವರು ಹೊಂಬಾಳಮ್ಮರವರ ಹೆಸರಿನಲ್ಲಿ ಒಂದು ಮನೆ ಕೊಡಿಸಿದರು ಎಂದರೆ ಸರಿಯಲ್ಲ. ನನ್ನ ಪ್ರಕಾರ ಸದರಿ ಮನೆಯನ್ನು ನನ್ನ ಮಾವ ಪೇಟಯ್ಯ ನನ್ನ ಅತ್ತೆಗೆ ಕೊಡಿಸಿದ್ದಾರೆ. ಸಾಕ್ಷಿ ಮುಂದುವರಿದು, ಸದರಿ ಮನೆಯನ್ನು ಹೋಂಬಾಳಮ್ಮರವರು ತಮ್ಮ ಉಳಿತಾಯದಿಂದ ಮತ್ತು ಸಾಲ ಮಾಡಿ ಖರೀದಿಸಿದ್ದಾರೆ. ಸಾಲ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ದಾಖಲೆ ನೋಡಿದ್ದಿರಾ ಎಂದರೆ ಇಲ್ಲ. ಮನೆ ಕೊಂಡುಕೊಳ್ಳುವ ಪೂರ್ವದಲ್ಲಿ ಪೇಟಯ್ಯ ಮತುತ ಹೊಂಬಾಳಮ್ಮ ಮಂಡ್ಯದಲ್ಲಿ ಬಾಡಿಗೆ ಮನೆಯಲ್ಲಿದ್ದು, ಮನೆ ಕೊಂಡು ಕೊಂಡ ನಂತರ ಮನೆಗೆ ಬಂದರು ಎಂದರೆ ಗೊತ್ತಿಲ್ಲ. ನಿಪಿ–17ರ ದಾಖಲೆಯೇ ದಾವಾ ಐಟಂ ನಂ.5 ಕ್ಕೆ ಸಂಬಂಧಿಸಿದ ಕ್ರಯಪತ್ರ ಎಂದರೆ ಸರಿ. ಪೇಟಯ್ಯ ಮತ್ತು ಹೊಂಬಾಳಮ್ಮರವರ ಒಟ್ಟು ಕುಟುಂಬಕ್ಕೆ ಇದ್ದ ಆಸ್ತಿ ದಾವಾ ಐಟಂ ನಂ. 5 ಮಾತ್ರ ಎಂದರೆ ನನಗೆ ಗೊತ್ತಿದ್ದಂತೆ ಅದು ಮಾತ್ರ ಆಗಿತ್ತು. ಆದರೆ ಬೇರೆ ಆಸ್ತಿಗಳು ಇದ್ದವು ಎಂದು ಹೇಳುತ್ತಿದ್ದರು. ಬೇರೆ ಆಸ್ತಿಗಳು ಇದ್ದವು ಎಂಬ ಬಗ್ಗೆ ಅದನ್ನು ಹುಡುಕಿ ಈ ದಾವೆಯಲ್ಲಿ ಸೇರಿಸಲು ಪ್ರಯತ್ನಿಸಿದ್ದಿರಾ ಎಂದರೆ ಇಲ್ಲ. ಪ್ರಯತ್ನ ಪಡದೇ ಇರಲು ಏನಾದರೂ ಕಾರಣ ಇತ್ತೇ ಎಂದರೆ ಸಾಕ್ಷಿ ಉತ್ತರಿಸುವುದಿಲ್ಲ. ದಾವಾ ಐಟಂ ನಂ. 5 ನ್ನು ಪೇಟಯ್ಯ ಮತ್ತು ಅವರ 5 ಜನ ಮಕ್ಕಳು ಸೇರಿ 1ನೇಪ್ರತಿವಾದಿಗೆ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟರು ಎಂದರೆ ಸರಿಯಲ್ಲ. ನಿಪಿ–11ರ ದಾಖಲೆ ಸದರಿ ಹಕ್ಕು ನಿವೃತ್ತಿ ಪತ್ರ ಎಂದರೆ ಸರಿ. ಸಾಕ್ಷಿ ಮುಂದುವರಿದು, 1ನೇ ಪ್ರತಿವಾದಿಗೆ ಸಾಲ ತೆಗೆದುಕೊಳ್ಳಲು ಅನುಕೂಲವಾಗಲೀ ಎಂಬ ಕಾರಣಕ್ಕೆ ಆ ದಾಖಲೆ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಪಿ–11 ರಲ್ಲಿ ಬರೆದ ಒಕ್ಕಣೆಗಳನ್ನು ತಿಳಿದುಕೊಂಡು ಹೇಳುತ್ತಿದ್ದಿರಾ ಎಂದರೆ ನನಗೆ ಗೊತ್ತಿದ್ದ ವಿಷಯ ಹೇಳುತ್ತಿದ್ದೇನೆ. ನಿಪಿ–11ರ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಮೊದಲು ನಾನು ಮನನ ಮಾಡಿಕೊಂಡಿದ್ದೇನೆ ಎಂದರೆ ನೋಡಿದ್ದೇನೆ. ನಿಪಿ–11 ನ್ನು ಬರೆದುಕೊಡುವ 12 ವರ್ಷ ಮೊದಲೇ ಹೊಂಬಾಳಮ್ಮ ತೀರಿಕೊಂಡಿದ್ದರು ಎಂದರೆ ಸರಿ. ಸದರಿ ದಾವಾ ಐಟಂ ನಂ. 5 ನ್ನು ವಿಭಾಗ ಮಾಡಿಕೊಳ್ಳದೇ ಇಂಜಿನಿಯರಿಂಗ್ ಓದಿ

ನಿರುದ್ಯೋಗಿಯಾಗಿದ್ದ 1ನೇ ಪ್ರತಿವಾದಿಗೆ ಎಲ್ಲರೂ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟರು ಎಂದರೆ ಸರಿಯಲ್ಲ.

ಪೇಟಯ್ಯರವರ ಗಂಡು ಮಕ್ಕಳು ಚೆನ್ನಾಗಿ ಓದಿ ಒಳ್ಳೆಯ ಉದ್ಯೋಗದಲ್ಲಿದ್ದ ಕಾರಣ ಪ್ರತ್ಯೇಕ ಪ್ರತ್ಯೇಕ ಆಸ್ತಿಗಳನ್ನು ಸ್ವಂತವಾಗಿ ಸಂಪಾದಿಸಿದರು ಎಂದರೆ ಸರಿಯಲ್ಲ. ಪೇಟಯ್ಯರವರ ಗಂಡು ಮಕ್ಕಳು ಸಂಪಾಧಿಸಿದ ಆಸ್ತಿಗಳೆಲ್ಲಾ ಅವರ ಸ್ವಂತ ಪರಿಶ್ರಮದಿಂದ ಸಂಪಾದಿಸಿದ್ದು ಎಂದರೆ ಸರಿಯಲ್ಲ. ಎಲ್ಲವನ್ನು ನಾವು ಕುಟುಂಬಕ್ಕೆ ವ್ಯಯ ಮಾಡಿದ್ದೇವೆ. ಪೇಟಯ್ಯರವರ ಕುಟುಂಬಕ್ಕೆ ನಾವು ಸಹಾಯ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವ ಪೇಟಯ್ಯರವರ ಮೊದಲನೇ ಮಗನಾದ ಬಿ.ಪಿ ಚಂದ್ರಶೇಖರ್ ರವರು 12.07.2012 ರಂದು ತೀರಿಕೊಂಡರು ಎಂದರೆ ಸರಿ . 5ನೇ ಪ್ರತಿವಾದಿ ಚಂದ್ರಶೇಖರ್ ರವರ ಪತ್ನಿ ಮತ್ತು 6ನೇ ಪ್ರತಿವಾದಿ ಅವರ ಮಗ ಎಂದರೆ ಸರಿ.

ಬಿ.ಪಿ ಚಂದ್ರಶೇಖರ್ ರವರು ಮಂಡ್ಯದಲ್ಲಿ ಯಾವ ಮನೆಯಲ್ಲಿದ್ದರು ಎಂದರೆ ನನಗೆ ಗೊತ್ತಿದ್ದ ಪ್ರಕಾರ ಅವರು ತನ್ನ ತಂದೆ ತಾಯಿಯ ಜೊತೆ ವಾಸವಿದ್ದರು. ಬಿ.ಪಿ ಚಂದ್ರಶೇಖರ್ ರವರು ತೀರಿಕೊಂಡಾಗ ಅವರು ಸ್ವಂತ ಮನೆಯಲ್ಲಿ ವಾಸವಿದ್ದರು ಎಂದರೆ ಆ ಬಗ್ಗೆ ನಮ್ಮ ಗಮನಕ್ಕೆ ಬಂದಿರಲಿಲ್ಲ. ಬಿ.ಪಿ ಚಂದ್ರಶೇಖರ್ ರವರು ಮಂಡ್ಯ ಪಟ್ಟಣದ ರಾಜ್ ಕುಮಾರ್ ಬಡಾವಣೆಯಲ್ಲಿ ಮನೆ ನಂ. 54 ರಲ್ಲಿ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಳಾಸವನ್ನು ವಾದ ಪತ್ರದಲ್ಲಿ ನಾನೇ ತಿಳಿಸಿದ್ದೇನೆ ಎಂದರೆ ಯಾರೋ ಕೊಟ್ಟಿದ್ದ ವಿಳಾಸವನ್ನು ಹಾಕಿದ್ದೇನೆ . ಸದರಿ ವಿಳಾಸವನ್ನು ನಿಮಗೆ ಯಾರು ಕೊಟ್ಟರು ಎಂದರೆ ನನಗೆ ನೆನಪಿಲ್ಲ. ಸದರಿ ಮನೆಯ ಜೊತೆಯಲ್ಲಿ ಬಿ.ಪಿ ಚಂದ್ರಶೇಖರ್ ರವರಿಗೆ ಬೇರೆ ಯಾವ ಆಸ್ತಿಗಳು ಇದ್ದವು ಎಂದರೆ ನನ್ನ ಗಮನಕ್ಕೆ ಬಂದಿಲ್ಲ. ಬಿ.ಪಿ ಚಂದ್ರಶೇಖರ್ ರವರ ಹೆಸರಿನಲ್ಲಿದ್ದ ಮನೆಯನ್ನು ಈ ದಾವೆಯಲ್ಲಿ ಸೇರಿಸಿದ್ದಿರಾ ಎಂದರೆ ಸೇರಿಸಿದ್ದೇನೆ.

ನನ್ನ ಗಂಡ ಅಮೇರಿಕಾದಲ್ಲಿ ಅಪಾರವಾದ ಸಂಪತ್ತನ್ನು ಸಂಪಾದಿಸಿದ್ದಾರೆ ಎಂದರೆ ಏನು ಆಸ್ತಿ ಇಲ್ಲ ಸಾಲ ಇದೆ ಎಂದು ನುಡಿಯುತ್ತಾರೆ. ನಮಗೆ ಬೆಂಗಳೂರಿನಲ್ಲಿ ಮನೆ ಇತ್ತು ಎಂದರೆ ಬೆಂಗಳೂರಿನಲ್ಲಿ ಮತ್ತು ಎಲ್ಲಿಯೂ ಕೂಡ ಮನೆ ಇರಲಿಲ್ಲ. ನಮಗೆ ಮೈಸೂರಿನಲ್ಲಿಯೂ ಕೂಡ ಮನೆ ಇತ್ತು ಎಂದರೆ ಇಲ್ಲ, ಎಲ್ಲಾ ಹಣವನ್ನು ಕುಟುಂಬಕ್ಕೆ ಕೊಟ್ಟಿದ್ದೇವೆ. ಎಲ್ಲಾ ಹಣವನ್ನು ಕುಟುಂಬಕ್ಕೆ ಕೊಟ್ಟಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲೆಲ್ಲಿ ಎಷ್ಟು ಎಷ್ಟು ಸಾಲ ಇದೆ ಎಂದು ಹೇಳಲು ಆಗುತ್ತದೆಯೇ

ಎಂದರೆ ಈಗ ಹೇಳಲಾಗುವುದಿಲ್ಲ. ಆದರೆ ಸಾಲ ಇದೆ. ಸಾಲ ಇದೆ ಎಂಬ ವಿಚಾರವನ್ನು ವಾದ ಪತ್ರದಲ್ಲಿ ಬರೆಸಿದ್ದಿರಾ ಎಂದರೆ ಇಲ್ಲ.

4ನೇ ಪ್ರತಿವಾದಿ ಈಗಲೂ ಕೂಡ ಅಮೇರಿಕಾದಲ್ಲಿ ಇದ್ದಾರೆ. 4ನೇ ಪ್ರತಿವಾದಿ ಅಮೇರಿಕಾದಿಂದ ಮಂಡ್ಯಕ್ಕೆ ಬಂದು ಹೋಗುತ್ತಿರುತ್ತಾರೆ ಎಂದರೆ ಸರಿ. 4ನೇ ಪ್ರತಿವಾದಿ ಅಮೇರಿಕಾ, ಮೈಸೂರು, ಬೆಂಗಳೂರಿನಲ್ಲಿ ಮನೆ ಹೊಂದಿದ್ದಾರೆ ಎಂದರೆ ಬೆಂಗಳೂರಿನಲ್ಲಿ ಮನೆ ಇಲ್ಲ ಆದರೆ ಅಮೇರಿಕಾ ಮತ್ತು ಮೈಸೂರಿನಲ್ಲಿ ಅವರಿಗೆ ಮನೆ ಇದೆ. 4ನೇ ಪ್ರತಿವಾದಿಯ ಅಮೇರಿಕಾ ಮತ್ತು ಮೈಸೂರಿನಲ್ಲಿರುವ ಮನೆಯನ್ನು ದಾವೆಯಲ್ಲಿ ಸೇರಿಸಿದ್ದಿರಾ ಎಂದರೆ ಇಲ್ಲ. ಸಾಕ್ಷಿ ಮುಂದುವರಿದು, ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಯಾವ ಸಾಲಿನಿಂದ ಯಾವಾ ಸಾಲಿನವರೆಗೆ ನನ್ನ ಗಂಡ ಮತ್ತು ಸಹೋದರರು ಒಟ್ಟಿಗೆ ಇದ್ದರು ಎಂದರೆ ಅಮೇರಿಕಾಗೆ ಹೋಗುವವರೆಗೆ ಒಟ್ಟಿಗೆ ಇದ್ದರು. ನನ್ನ ಗಂಡ ಮತ್ತು 4ನೇಪ್ರತಿವಾದಿ ಅಮೇರಿಕಾಗೆ ಹೋಗುವವರೆಗೂ ಒಟ್ಟಿಗೆ ಇದ್ದರು. ಸಾಕ್ಷಿ ಮುಂದುವರಿದು ಇಲಿಲಗೆ ಬಂದ ಮೇಲೂ ಇಬ್ಬರು ಒಟ್ಟಿಗೆ ಇದ್ದರು ಎಂದು ನುಡಿಯುತ್ತಾರೆ. ನನ್ನ ಗಂಡ 1969 ರಲ್ಲಿ ಮತ್ತು 4ನೇ ಪ್ರತಿವಾದಿ 1979 ರಲ್ಲಿ ಅಮೇರಿಕಾಗೆ ಹೋದರು. ಅದಕ್ಕೂ ಮೊದಲು 4ನೇ ಪ್ರತಿವಾದಿ ಯು.ಕೆ.ಗೆ ಹೋಗಿದ್ದರು. ಅಲ್ಲಿಗೆ ಹೋದ ನಂತರ ಅವಶ್ಯಕತೆ ಇದ್ದಾಗ ನನ್ನ ಗಂಡ ಮತ್ತು 4ನೇ ಪ್ರತಿವಾದಿ ಮಂಡ್ಯಕ್ಕೆ ಬರುತ್ತಿದ್ದರು ಎಂದರೆ ಸರಿಯಲ್ಲ. ಅವರ ಮನೆಯಾಗಿದ್ದರಿಂದ ಬರುತ್ತಿದ್ದರು. ವಿಶ್ವಾಸ ಇದ್ದ ಕಾರಣ ಮಂಡ್ಯದಲ್ಲಿದ್ದ ಮನೆಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ಈಗ 1ನೇ ಪ್ರತಿವಾದಿ ವಾಸವಿರುವ ಮನೆಯನ್ನು ನಾವೇ ಕಟ್ಟಿಸಿದ್ದರಿಂದ ಹಾಗೂ ಬೇರೆ ಮನೆ ಇಲ್ಲದೇ ಇದ್ದ ಕಾರಣ ಅದೇ ಮನೆಗೆ ಅವರಿಬ್ಬರು ಬರುತ್ತಿದ್ದರು. ನೀವೆ ಮನೆ ಕಟ್ಟಿಸಿದ್ದಿರಿ ಎಂಬ ಬಗ್ಗೆ ದಾಖಲೆ ಇದೆಯೇ ಎಂದರೆ 1ನೇ ಪ್ರತಿವಾದಿಯ ಬಳಿ ನಾವು ಹಣ ಕಳುಹಿಸಿದ ಬಗ್ಗೆ ದಾಖಲೆಗಳು ಇವೆ. ಸದರಿ ಮನೆಯನ್ನು ನಾವು ಕಟ್ಟಿಸಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆಗಳು 1ನೇ ಪ್ರತಿವಾದಿಯ ಬಳಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-11ರ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟ ನಂತರ ನನ್ನ ಗಂಡ ಮತ್ತು ಅವರ ಸಹೋದರರ ಮಧ್ಯೆ ಸೋದರಿಕೆಯ ಬಾಂಧವ್ಯ ಕಾನೂನಾತ್ಮಕವಾಗಿ ಹೊರಟು ಹೋಗಿದೆ ಎಂದರೆ ಸರಿಯಲ್ಲ. ಆ ಕಾರಣದಿಂದಾಗಿ ನನ್ನ ಗಂಡ, 4ನೇ ಪ್ರತಿವಾದಿ ಬಿ.ಪಿ ಚಂದ್ರಶೇಖರ್ ರವರ ಮಧ್ಯೆ ಮತುತ 1ನೇ ಪ್ರತಿವಾದಿಯ ವ್ಯವಹಾರದ ಮಧ್ಯೆ ಯಾವುದೇ

ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾವು ನಮ್ಮ ಹಣವನ್ನು ಅಲ್ಲಿ ಹೂಡಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಒಟ್ಟು ಕುಟುಂಬ ಎಂದು ತೋರಿಸುವ ಬಗ್ಗೆ ಮತದಾರರ ಪಟ್ಟಿ ಇದೆಯೇ ಎಂದರೆ ಇಲ್ಲ. ಆಧಾರ್ ಕಾರ್ಡ್ ನಿಮ್ಮ ಬಳಿ ಇದೆಯೇ ಎಂದರೆ ನನ್ನ ಬಳಿ ಇಲ್ಲ ನನ್ನ ಗಂಡ ಇದ್ದಾಗ ಅವರ ಬಳಿ ಇತ್ತು. ಅವರ ಮರಣಾನಂತರ ಅವರ ಆಧಾರ್ ಕಾರ್ಡ್ ನಿಮ್ಮ ಬಳಿ ಇರಬೇಕಲ್ಲವೇ ಅಂದರೆ ಇಲ್ಲ, ಮಂಡ್ಯದಲ್ಲಿಯೇ ಬಿಟ್ಟಿರುತ್ತಾರೆ. ನನ್ನ ಗಂಡನ ಮರಣಾನಂತರ ಅವರ ಎಲ್ಲಾ ದಾಖಲೆಗಳು ನನ್ನ ಬಳಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದು ತೋರಿಸುವ ಬಗ್ಗೆ ಕುಟುಂಬದ ಸದಸ್ಯರ ಜೀವಿತ ಪ್ರಮಾಣ ಪತ್ರ ಇದೆಯೇ ಎಂದರೆ ಇಲ್ಲ. ಹಲವಾರು ದಾಖಲೆಗಳು ನನ್ನ ಬಳಿ ಇಲ್ಲದೇ ಇರುವ ಕಾರಣ ನಾನಾಗಲೀ ನನ್ನ ಮಗಳಾಗಲೀ ಒಟ್ಟು ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ. ಕೆಲವು ದಾಖಲೆಗಳು 1ನೇ ಪ್ರತಿವಾದಿಯ ಸ್ವಾಧೀನದಲಿದ್ದು, ನಮ್ಮ ಸ್ವಾಧೀನದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-1ರಿಂದ 10ರ ಪಹಣಿಗಳು 1ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ನಾವು ಕಳುಹಿಸಿದ ಹಣದಿಂದ ತಮ್ಮ ಹೆಸರಿನಲ್ಲಿ ಮಾಡಿಕೊಂಡಿದ್ದಾರೆ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.